ಬಹಳ ಗಹನವಾದ ವಿಷಯವೆಂದು ಪರಿಗಣಿಸಿ ಹಾಕಿದ್ದ ಸ್ಟೇಟಸ್‌ಗೆ ಕೇವಲ ಐದು ಲೈಕಷ್ಟೆ ಬಂದಿತ್ತು. ಯಾರೂ ಕಾಮೆಂಟ್ ಹಾಕಿರಲಿಲ್ಲ. ನೋಡಿ ಇರುಸುಮುರುಸಾಗಿ, ಇನ್ನೊಂದು ಸ್ಟ್ರಾಂಗ್ ಸ್ಟೇಟಸ್ ಹಾಕಿದರೆ ಹೇಗೆ ಎಂದು ಯೋಚಿಸುವಷ್ಟರಲ್ಲಿ ತಾನು ಮಾಡಿದ ತಪ್ಪು ಅರಿವಾಯಿತು. ಫೇಸ್‌ಬುಕ್‌ನಲ್ಲಿ ಅಪಾರ್ಟ್‌ಮೆಂಟ್‌ನಲ್ಲಿರುವ ಒಂದಿಬ್ಬರಷ್ಟೇ ಅವನ ಕಾನ್‌ಟ್ಯಾಕ್ಟ್ ಲಿಸ್ಟ್‌ನಲ್ಲಿದ್ದವರು. ಸ್ಕೈಲ್ಯಾಂಡ್ ಅಪಾರ್ಟ್‌ಮೆಂಟ್ಸ್ ರೆಸಿಡೆಂಟ್ಸ್ ಅಸೋಸಿಯೇಷನ್ನಿನ ಗ್ರೂಪ್ ಪೇಜ್‌ಗೆ ಹೋಗಿ, ಈ ಹಿಂದೆ ಬರೆದ ಸ್ಟೇಟಸ್‌ಗೆ ಕಾಲು–ಬಾಲ ಸೇರಿಸಿ, ಎಂಟರ್ ಒತ್ತಿದ್ದೇ ತಡ, ನಾಲ್ಕು ಲೈಕ್ ಬಿತ್ತು. ಇಂತಹ ಅನೇಕ ವಿಷಯಗಳು ಅಲ್ಲಿ ಚರ್ಚಿತವಾಗಿದ್ದು ಕಣ್ಣಿಗೆ ಬಿದ್ದು, ಅಲ್ಲಿದ್ದ ಯಾರ್‍ಯಾರದ್ದೋ ಪೋಸ್ಟ್‌ಗಳನ್ನು ಸುಮ್ಮನೇ ಓದುತ್ತಾ ಹೋದ. ಅವನು ವರದಿ ಮಾಡಿದ ಸಮಸ್ಯೆ ಬಗ್ಗೆ ಕೆಲ ತಿಂಗಳ ಹಿಂದೆಯೇ ದೊಡ್ಡ ಚರ್ಚೆ ನಡೆದಿತ್ತು. ಯಾರದ್ದೋ ಫ್ಲಾಟ್‌ನ ಗೋಡೆಯಲ್ಲಿ ನವೆಂಬರ್ ತಿಂಗಳ ಅತಿ ಮಳೆಯಿಂದ ಉಂಟಾದ ಡ್ಯಾಂಪ್‌ನೆಸ್, ಮತ್ಯಾರದ್ದೋ ಸಿಂಕ್‌ನಲ್ಲಿ ಲೀಕೇಜ್, ಟ್ಯಾಯ್ಲೆಟ್ ಪ್ರಾಬ್ಲಮ್, ಸೀಪೇಜ್, ಸೆಕ್ರೇಟರಿಯ ಉತ್ತರ, ಬಿಲ್ಡರ್ ಸಮಜಾಯಿಶೀ...

ಪೇಜಿನಿಂದ ಹೊರ ಬರುತ್ತಿದ್ದಂತೆ ಸಂಜೆ ನಾಲ್ಕಕ್ಕೆ ಇಂಪಾರ್ಟೆಂಟ್ ಮೀಟಿಂಗ್ ಇದೆಯೆಂದು ಬಾಲು ಕಳುಹಿಸಿದ ಮೆಸೇಜ್ ಹಣಕಿತು. ಯಾಕೋ ಎಲ್ಲವೂ ಬೋರ್ ಅನ್ನಿಸಿ ಕ್ಯಾಂಟೀನ್‌ಗೆ ನಡೆದ.

★★★

ದಿನಗಳು ರಾಕೆಟ್ ವೇಗದಲ್ಲಿ ಚಕಚಕನೆ ಉರುಳಿಹೋಗುತ್ತಿದ್ದವು. ಆಗಲೇ ಶನಿವಾರವೂ ಮುಗಿಯುತ್ತಾ ಬಂದು ಮಲಗಿದ್ದಲ್ಲಿಂದಲೇ ಕಣ್ಣು ಗಡಿಯಾರದತ್ತ ಹೊರಳಿಸಿದಾಗ ಎದುರಿನ ಗೋಡೆಯಲ್ಲಿ ಅದು ಜೀವ ಕುಣಿಸುತ್ತಾ ನಿಂತಿತ್ತು! ಇನ್ನೂ ಉಳಿದಿರಬಹುದಾದ ಗಂಟೆಗಳ ಲೆಕ್ಕ ಪಕ್ಕನೇ ಸಿಗದೆ ಆತಂಕಗೊಂಡು, ಧಡ್ಡನೆದ್ದು, ಮತ್ತೆ ಹಾಲಿಗೆ ಬಂದು ಕಂಪ್ಯೂಟರ್ ಮುಂದೆ ಕುಳಿತ. ಅರೆ, ಮೂರು ದಿನಗಳಿಂದ ತಾನಿನ್ನೂ ಪಾಯಿಂಟ್ ನಂಬರ್ ಒನ್‌ನಲ್ಲೇ ಇದ್ದೇನೆಂದು ಹೊಳೆದು ಗಲಿಬಿಲಿಯಾದರೂ ಮರುಕ್ಷಣ ಪಾಯಿಂಟ್ ನಂಬರ್ ಒನ್‌ಅನ್ನು ಅನುಸರಿಸಲಿಲ್ಲವೆನ್ನುವುದು ನೆನಪಾಗಿ ವಿಚಿತ್ರ ಖುಷಿಯಾಯಿತು. ಮರೆತದ್ದು ಪ್ರಾಯಶಃ ಒಳ್ಳೆಯದ್ದಕ್ಕೆನ್ನಿಸಿ ಪಾಯಿಂಟ್ ನಂಬರ್ ಟೂ ಬಗ್ಗೆ ಯೋಚಿಸತೊಡಗಿದ. ತುರ್ತಾಗಿ ಆಗಬೇಕಿರುವ ಕೆಲಸಕ್ಕಷ್ಟೇ ಪಾಯಿಂಟ್ ನಂಬರ್ ಟೂ ಎಂದೆನಿಸಿದ್ದೇ ಯಾವುದು ತುರ್ತಾಗಿ ನೆರವೇರಬೇಕಿದ್ದ ಎರಡನೇ ಕೆಲಸವೆಂದು ಹೊಳೆಯದೆ ತನ್ನ ತಲೆ ಏಕೋ ಖಾಲಿಯಾದಂತೆ ಅನ್ನಿಸಿ, ಮ್ಲಾನನಾಗಿ ಕಂಪ್ಯೂಟರ್ ಸ್ಕ್ರೀನನ್ನೇ ನೋಡುತ್ತಾ ಕುಳಿತ. ಊರಲ್ಲಿದ್ದ ತಂದೆ ತಾಯಿಯರ ನೆನಪು ನುಗ್ಗಿ ಬಂದು ಮನಸ್ಸು ವಿಚಲಿತವಾಯಿತು. ಮರುಕ್ಷಣ ಏನೋ ಹೊಳೆದವನಂತೆ, ಟಪಟಪ ಎಂದು ಕುಟ್ಟಿ ಅದನ್ನೇ ನಮೂದಿಸಿದ:

ಪಾಯಿಂಟ್ ನಂಬರ್ ಟೂ: ದಿ.9.1.2016 ಶನಿವಾರ, ರಾತ್ರಿ 10.40

ಮನೆಗೆ ಫೋನ್ ಮಾಡಿ ಅಪ್ಪ, ಅಮ್ಮರಿಗೆ ವಿಷಯ ತಿಳಿಸಿಬಿಡಬೇಕು!

ಒಂದು ಮೆಗಾ ಸಿರಿಯಲ್ಲೇ ನಡೆದುಬಿಡಬಹುದು. ಆದರೂ ಗೌತಮ ಬುದ್ಧನಾದ ತಾನು ನಿರ್ಲಿಪ್ತನಾಗುಳಿದುಬಿಡಬೇಕು. ಹೊಟ್ಟೆಯಾಳದಿಂದ ದುಃಖ ಉಮ್ಮಳಿಸಿ ಬಂದಂತಾಗಿ ಮೂಗು ಸೀಟಿ ಗೋಡೆಗೆ ಕೊಡವಿದ. ವಯಸ್ಸಾದ ಅವರ ಮುಂದೆ ಇನ್ನೂ ಬದುಕು ಕಂಡಿಲ್ಲದ ತಾನು ಸಾಯಬೇಕಿದೆ! ಕಾಲೇಜಿನಲ್ಲಿ ಓದುವಾಗಲಾಗಲೀ, ದೊಡ್ಡ ಐ.ಟಿ. ಕಂಪೆನಿಯಲ್ಲಿ ಕೆಲಸ